ಸಿ ಸಿ ನಂಬರ 1244/2023

| | | | |
|---|---|---|---|
| ಸಿಡಬ್ಲ್ಯೂ | 1 | ಪಿಡಬ್ಲ್ಯೂ | 1 |

ದಿನಾಂಕ 13.02.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲು ಆರೋಪಿ ಪರ ವಕೀಲರಿಂದಃ-**

ನಾನು ತೆಲಗಿ ಪೋಲೀಸ ಠಾಣೆ ಯಲ್ಲಿ ದೂರು ಸಲ್ಲಿಸಿರುತ್ತೇನೆ ಎಂದರೆ ಸರಿ. ದೂರನ್ನು ರೈಟರ್ ಬರೆದಿರುತ್ತಾರೆ. ನಮ್ಮ ಬಸ್ಸು ಮಂತ್ರಾಲಯ ದಿಂದ ಹರಿಹರಕ್ಕೆ ಬರುತ್ತಿತ್ತು ಎಂದರೆ ಸರಿ. ಮೇಲಾಧಿಕಾರಿಗಳು ಹೇಳಿದ ನಂತರ ದೂರನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಮೇಲಾಧಿಕಾರಿಗಳ ಒತ್ತಡ ಬಂದ ನಂತರ ಮಾರನೇ ದಿನ ದೂರನ್ನು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನೋವು ಆಗಿರುವ ಕಾರಣ ಮಾರನೇ ದಿನ ದೂರನ್ನು ಕೊಟ್ಟಿರುತ್ತೇನೆ. ದುಗ್ಗಾವತಿಯಲ್ಲಿ ಗಲಾಟೆಯಾದ ನಂತರ ಬಸ್ಸನ್ನು ಹರಿಹರಕ್ಕೆ ನಾನೇ ಚಲಾಯಿಸಿಕೊಂಡು ಹೋಗಿರುತ್ತೇನೆ ಎಂದರೆ ಸರಿಯಲ್ಲ. ಅದೇ ಬಸ್ಸನ್ನು ನಾನೇ ಚಾಲನೆ ಮಾಡಿಕೊಂಡು ಹೋಗಿರುತ್ತೇನೆ ಎಂದರೆ ಸರಿ. ಆ ಸಂಧರ್ಬದಲ್ಲಿ ನಾನು ಯಾವುದೇ ದೂರನ್ನು ಸಲ್ಲಿಸಿಲ್ಲಾ ಎಂದರೆ ಸರಿ. ಡಿಪೋಗೆ ಬಂದ ನಂತರ ಮೇಲಾಧಿಕಾರಿಗಳು ಹೇಳಿದ ಕಾರಣ ದೂರು ಕೊಟ್ಟಿರುತ್ತೇನೆ ಎಂದರೆ ಜಾಸ್ತಿ ನೋವು ಆಗಿರುವ ಕಾರಣ ಮಾರನೇ ದಿನ ದೂರನ್ನು ಸಲ್ಲಿಸಿರುತ್ತೇನೆ. ನನಗೆ ಎದೆ ನೋವು ತಲೆ ನೋವು ಆಗಿರುತ್ತದೆ. ದುಗ್ಗಾವತಿ ಯಿಂದ ತೆಲಗಿ 4 ಕಿ ಮೀ ಇದೆ ಎಂದರೆ ಗೊತ್ತಿಲ್ಲಾ. ತೆಲಗಿಯಲ್ಲಿ ಸರ್ಕಾರಿ ಆಸ್ಪತ್ರೆ ಇದೆ ಎಂದರೆ ಗೊತ್ತಿಲ್ಲಾ. ಹರಿಹರದಲ್ಲಿ ಸಹ ಸರ್ಕಾರಿ ಆಸ್ಪತ್ರೆ ಇದೆ ಎಂದರೆ ಗೊತ್ತಿಲ್ಲಾ. ಖಾಸಗಿ ಆಸ್ಪತ್ರೆಗಳೂ ಕೂಡ ಹರಿಹರದಲ್ಲಿ ಇದೆ ಎಂದರೆ ಇರಬಹುದು. ನಾನು ಮಾರನೇ ದಿನ ಹರಪನಹಳ್ಳಿ ಯಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ ಎಂದರೆ ಅದೇ ದಿನ ಸಂಜೆ ತೆಗೆದುಕೊಂಡಿರುತ್ತೇನೆ. ನಾನು ಆಗಾಗ ಹರಪನಹಳ್ಳಿ ಆಸ್ಪತ್ರೆಯಲ್ಲಿ

ಸಿ ಸಿ ನಂಬರ 1244/2023

| | | | |
|---|---|---|---|
| ಸಿಡಬ್ಲ್ಯೂ | 1 | ಪಿಡಬ್ಲ್ಯೂ | 1 |

ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ಅದೇ ದಿನ ಏಕೆ ಚಿಕಿತ್ಸೆ ಪಡೆದುಕೊಂಡಿಲ್ಲಾ ಎಂದರೆ ನಾನು ಅದೇ ದಿನ ಹೋಗಿದ್ದೆ ಆದರೆ ಮಾರನೇ ದಿನ ಬರಲು ವೈದ್ಯರು ತಿಳಿಸಿರುತ್ತಾರೆ. ನಾನು ಸರ್ಕಾರಿ ಆಸ್ಪತ್ರೆಯಲ್ಲಿ ಎಂ ಎಲ್ ಸಿ ವರದಿ ಮಾಡಿಸಿಲ್ಲಾ ಎಂದರೆ ಸರಿ. ಹಲವಾಗಲು ಸರ್ಕಾರಿ ಆಸ್ಪತ್ರೆಯಲ್ಲಿ ಹೋಗಿ ದೂರು ಕೊಟ್ಟಿರುತ್ತೇನೆ ಎಂದರೆ ಸರಿ. ಬಸ್ಸು ಫುಲ್ ರಶ್ ಇತ್ತು ಎಂದರೆ ಸರಿ. ಆಗ 1 ರಿಂದ 3 ನೇ ಆರೋಪಿತರು ಬಸ್ಸನ್ನು ಹತ್ತಲು ಬಂದಾಗ ಬಸ್ಸನ್ನು ಹತ್ತಲು ಅವಕಾಶ ಕೊಡದೇ ಬಸ್ಸನ್ನು ಚಾಲನೆ ಮಾಡಿಕೊಂಡು ಹೋಗಿರುತ್ತೇನೆ ಎಂದರೆ ಸರಿಯಲ್ಲ. ಬಸ್ಸ ನಿಲ್ಲಿಸದ ಕಾರಣ ಬಸ್ಸನ್ನು ಗ್ರಾಮಸ್ಥರು ಬಸ್ಸನ್ನು ನಿಲ್ಲಿಸಿದರು ಎಂದರೆ ಸರಿಯಲ್ಲ. ಬಸ್ಸ ನಿಲ್ದಾಣದ ಹತ್ತಿರ ಪಂಚನಾಮೆಯನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಬಸ್ಸ ನಿಲ್ದಾಣದ ಹತ್ತಿರ ಬಸ್ಸನ್ನು ನಿಲ್ಲಿಸಲಿಲ್ಲ ಎಂದರೆ ಸರಿಯಲ್ಲ. ಬಸ್ಸ ನಿಲ್ದಾಣದ ಹತ್ತಿರ ಬಸ್ಸನ್ನು ನಿಲ್ಲಿಸುವುದಿಲ್ಲಾ ಸ್ವಲ್ಪ ಮುಂದೆ ಹೋಗಿ ನಿಲ್ಲಿಸುತ್ತೇವೆ ಎಂದರೆ ಸರಿ. ಗ್ರಾಮಸ್ಥರು ಬಸ್ಸ ನಿಲ್ದಾಣದ ಹತ್ತಿರ ಬಸ್ಸನ್ನು ನಿಲ್ಲಿಸಿ ಅಂತಾ ಹೇಳಿದ ಕಾರಣ ಪ್ರಕರಣ ದಾಖಲಿಸುತ್ತೇವೆ ಅಂತಾ ಹೇಳಿದ ಕಾರಣ ಈ ಕೇಸನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರು ನನಗೆ ಅವಾಚ್ಯಶಬ್ದಗಳಿಂದ ಬೈದಿಲ್ಲಾ ಎಂದರೆ ಸರಿಯಲ್ಲ. ಮಹಜರ ಆದ ನಂತರ ಪೋಲೀಸ ಠಾಣೆಗೆ ಹೋದೆ ಎಂದರೆ ಸರಿ. ಪೋಲೀಸ ಠಾಣೆಗೆ ಹೋದ ನಂತರ ಪ್ರಿಂಟ್ ತೆಗೆದು ನಂತರ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿ. ದುರ್ಗಾವತಿಯಲ್ಲಿ ನಾನು ಸಹಿ ಮಾಡಿರುವುದಿಲ್ಲಾ ಎಂದರೆ ಸರಿಯಲ್ಲ. ಖಾಲಿ ಪೇಪರ್ ನಲ್ಲಿ ಮಹಜರಗೆ ಸಹಿ ಪಡೆದುಕೊಂಡಿರುತ್ತಾರೆ. ಪ್ರತಿಬಾರಿ ನಾನು ಬಸ್ಸನ್ನು ನಿಲ್ದಾಣದಲ್ಲಿ ನಿಲ್ಲಿಸದ ಕಾರಣ ಅದನ್ನು ಪ್ರಶ್ನೆ ಮಾಡಿದ್ದಕ್ಕೆ ಆರೋಪಿತರ ವಿರುದ್ಧ ಕೇಸನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಾಃ-

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಗಣಕೀಕೃತ ಗೊಳಿಸಲಾಯಿತು.) ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಹರಪನಹಳ್ಳಿ.